# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1] | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 825 |
| 2] | ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಟಿ.ರವಿ<br>(ವಿಧಾನಸಭೆಯಿಂದ ಚುನಾಯಿತರಾದವರು ಕ್ಷೇತ್ರ) |
| 3] | ಉತ್ತರಿಸುವ ದಿನಾಂಕ | : | 13/03/2025 |
| 4] | ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಭೌಗೋಳಿಕ ವ್ಯಾಪ್ತಿ ಎಷ್ಟು;</td><td>ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಭೌಗೋಳಿಕ ವ್ಯಾಪ್ತಿಯು ಒಟ್ಟು 624.6 ಚ.ಕಿ.ಮೀ. ಇದೆ.</td></tr>
<tr><td>ಆ)</td><td>ಈ ಪೊಲೀಸ್ ಠಾಣೆಯ ವ್ಯಾಪ್ತಿ ತುಂಬಾ ಹೆಚ್ಚಾಗಿರುವುದರಿಂದ ಸಾರ್ವಜನಿಕರಿಗೆ ಠಾಣೆಗೆ ಬಂದು ಹೋಗಲು ಕಷ್ಟವಾಗುತ್ತಿರುವುದು ಹಾಗೂ ಪೊಲೀಸರಿಗೂ ತಮ್ಮ ಕರ್ತವ್ಯ ನಿರ್ವಹಿಸಲು ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಭೌಗೋಳಿಕ ವ್ಯಾಪ್ತಿಯು ಒಟ್ಟು 624.6 ಚ.ಕಿ.ಮೀ. ಇದ್ದು, ಠಾಣೆಯ ಮಂಜೂರಾತಿ ಬಲ ಕೆಳಕಂಡಂತಿದೆ:–
<table>
<tr><th>ಪಿ.ಐ</th><th>ಪಿ.ಎಸ್.ಐ</th><th>ಎ.ಎಸ್.ಐ</th><th>ಸಿ.ಹೆಚ್.ಸಿ</th><th>ಸಿ.ಪಿ.ಸಿ</th></tr>
<tr><td>01</td><td>04</td><td>06</td><td>20</td><td>34</td></tr>
</table>
ಚಿಕ್ಕಮಗಳೂರು ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ಕರ್ತವ್ಯಕ್ಕೆ ಯಾವುದೇ ತೊಡಕಾಗದಂತೆ ಪೂರ್ಣ ಪ್ರಮಾಣದ ಅಧಿಕಾರಿ/ಸಿಬ್ಬಂದಿಯವರುಗಳನ್ನು ನಿಯೋಜಿಸಲಾಗಿದ್ದು, ಕರ್ತವ್ಯ ನಿರ್ವಹಣೆಯಲ್ಲಿ ಯಾವುದೇ ತೊಂದರೆ ಕಂಡುಬಂದಿರುವುದಿಲ್ಲ.</td></tr>
<tr><td>ಇ)</td><td>ಈ ಸಮಸ್ಯೆಯನ್ನು ಪರಿಹರಿಸಲು ಚಿಕ್ಕಮಗಳೂರು ಗ್ರಾಮಾಂತರ ವ್ಯಾಪ್ತಿಯ ಕಳಸಾಪುರ ಗ್ರಾಮದಲ್ಲಿ ಪೊಲೀಸ್ ಠಾಣೆಯನ್ನು ಸ್ಥಾಪಿಸಬೇಕೆನ್ನುವ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;</td><td rowspan="2">ಚಿಕ್ಕಮಗಳೂರು ಗ್ರಾಮಾಂತರ ವ್ಯಾಪ್ತಿಯ ಕಳಸಾಪುರ ಗ್ರಾಮದಲ್ಲಿ ಪೊಲೀಸ್ ಠಾಣೆಯನ್ನು ತೆರೆಯುವ ಯಾವುದೇ ಪ್ರಸ್ತಾವನೆಯು ಪರಿಶೀಲನೆಯಲ್ಲಿರುವುದಿಲ್ಲ.</td></tr>
<tr><td>ಈ)</td><td>ಬಂದಿದ್ದರೆ, ಕಳಸಾಪುರ ಗ್ರಾಮದಲ್ಲಿ ಹೊಸ ಪೊಲೀಸ್ ಠಾಣೆ ತೆರೆಯಲಾಗುವುದೇ; ಈ ಕುರಿತು ಸರ್ಕಾರದ ನಿಲುವೇನು? (ವಿವರ ಒದಗಿಸಿ)</td></tr>
</table>

**ಸಂಖ್ಯೆ: ಹೆಚ್‌ಡಿ 37 ಪಿಓಪಿ 2025**

**(ಡಾ॥ ಜಿ.ಪರಮೇಶ್ವರ)**
ಗೃಹ ಸಚಿವರು.